VIJAYAVANI, 03-04-2018, Page No. 3, Nam aste Bengaluru.

ವಿಜಯವಾಣಿ

# ವಿಶ್ವ ಆರೋಗ್ಯ ದಿನದ ಅಂಗವಾಗಿ ಸೈಕಲ್ ಸ್ಟ್ರೀಟ್ ಜಾಥಾ

## ಬಿಎನ್ಎಂ ತಾಂತ್ರಿಕ ಮಹಾವಿದ್ಯಾಲಯದಿಂದ ಆಯೋಜನೆ » ವಿನೂತನ ಕಾರ್ಯಕ್ರಮದ ಮೂಲಕ ಪರಿಸರ, ಆರೋಗ್ಯ ಜಾಗೃತಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಗರದಲ್ಲಿ ವಾಹನ ದಟ್ಟಣೆ ದಿನೇದಿನೆ ಹೆಚ್ಚುತ್ತಿದೆ. ಮೋಟಾರುಬೈಕ್‌ನಲ್ಲಿ ಕಾಲೇಜಿಗೆ ಹೋಗುವುದು ವಿದ್ಯಾರ್ಥಿಗಳಿಗೆ ಪ್ರತಿಷ್ಠೆ ಎಂಬಂತಾಗಿದೆ. ಇವುಗಳಿಗೆ ಕಡಿವಾಣ ಹಾಕುವ ಹಾಗೂ ಆರೋಗ್ಯದ ಜಾಗೃತಿ ಮೂಡಿಸುವ ಉದ್ದೇಶದಿಂದ ಬನಶಂಕರಿ 2ನೇ ಹಂತದಲ್ಲಿರುವ ಬಿಎನ್ಎಂ ತಾಂತ್ರಿಕ ಮಹಾವಿದ್ಯಾಲಯವು ವಿನೂತನ ಸೈಕಲ್ ಜಾಥಾ ಆಯೋಜಿಸಲು ಸಜ್ಜಾಗಿದೆ.

ದಿಗ್ವಿಜಯ 24X7 NEWS ವಿಜಯವಾಣಿ ಮಾಧ್ಯಮ ಸಹಯೋಗ

ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸೈಕಲ್ ಬಳಕೆ ಪ್ರೋತ್ಸಾಹಿಸಲು ವಿಜಯವಾಣಿ ಮತ್ತು ದಿಗ್ವಿಜಯ 24X7 ನ್ಯೂಸ್ ಮಾಧ್ಯಮ ಸಹಯೋಗದಲ್ಲಿ ಬಿಎನ್ಎಂಐಟಿ ಏ.8 ವಿಶ್ವ ಆರೋಗ್ಯ ದಿನದಂದು 'ಸೈಕಲ್‌ಸ್ಟ್ರೀಟ್' ಆಯೋಜಿಸಿದೆ. ಸ್ವಾಮಿ ವಿವೇಕಾನಂದ ಶ್ರೇಷ್ಠ ಭಾರತ ಪ್ರತಿಷ್ಠಾನ ಸಹಯೋಗದಲ್ಲಿ ಜಾಥಾ ನಡೆಯಲಿದ್ದು, ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸುವ ನಿರೀಕ್ಷೆಯಿದೆ.

ಕೇಂದ್ರ ಸಂಸದೀಯ ಸಚಿವ ಅನಂತಕುಮಾರ್ ಜಾಥಾಗೆ ಚಾಲನೆ ನೀಡಲಿದ್ದು, ರಾಮಕೃಷ್ಣ ಮಠದ ಸ್ವಾಮಿ ತದ್ಯುಕ್ತಾನಂದಜೀ ಮತ್ತಿತರರು ಉಪಸ್ಥಿತರಿರಲಿದ್ದಾರೆ. ಬಿಎನ್ಎಂ ತಾಂತ್ರಿಕ ಮಹಾವಿದ್ಯಾಲಯದಿಂದ ಜಾಥಾ ಪ್ರಾರಂಭವಾಗಿ ಕೆ.ಆರ್.ರಸ್ತೆ, ಸೌತ್ ಎಂಡ್ ವೃತ್ತ, ಅಶೋಕ ಪಿಲ್ಲರ್, ಲಾಲ್‌ಬಾಗ್, ಸಿದ್ದಾಪುರ ದ್ವಾರ, ಲಾಲ್‌ಬಾಗ್ ಮುಖ್ಯದ್ವಾರ, ಲಾಲ್‌ಬಾಗ್ ಪಶ್ಚಿಮ ದ್ವಾರ, ನ್ಯಾಷನಲ್ ಕಾಲೇಜು ವೃತ್ತದ ಮೂಲಕ ಕಾಲೇಜಿಗೆ ಮರಳಲಿದೆ. ಆರೋಗ್ಯ ದಿನದ ಅಂಗವಾಗಿ ಕಾಲೇಜು ಸುತ್ತಮುತ್ತ ಗಿಡ ನೆಡುವ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ.



**ಪಾಲಕರೇ ಬೈಕ್ ಕೊಡಿಸುತ್ತಾರೆ:** ಕಾಲೇಜು ಮೆಟ್ಟಿಲೇರು ತ್ತಿದ್ದಂತೆಯೇ ಮಕ್ಕಳಿಗೆ ಪಾಲಕರು ಮೋಟಾರು ಬೈಕ್‌ಗಳನ್ನು ಖರೀದಿಸಿ ನೀಡುತ್ತಾರೆ. ಕಾಲೇಜಿಗೆ ಒಂದೆರಡು ಕಿ.ಮೀ. ಅಂತರದಲ್ಲಿ ಕಾಲೇಜಿದ್ದರೂ ವಿದ್ಯಾರ್ಥಿಗಳು ಬೈಕ್‌ನಲ್ಲೇ ಬರುವ ದೃಶ್ಯ ಬೆಂಗಳೂರಿನೆಲ್ಲೆಡೆ ನೋಡಬಹುದು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಸೈಕಲ್ ಬಳಸುವುದನ್ನು ಪ್ರೀತಿಸಲಿ ಎಂಬ ದೃಷ್ಟಿಯಿಂದ ಸೈಕಲ್ ಸ್ಟ್ರೀಟ್ ಆಯೋಜಿಸುತ್ತಿದ್ದೇವೆ ಎಂದು ಬಿಎನ್ಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ನಾರಾಯಣ ರಾವ್ ಆರ್ ಮಾನೆ ತಿಳಿಸಿದರು.




**ಮೂಲಸೌಕರ್ಯ ಅಗತ್ಯ:** ನಗರದ ರಸ್ತೆಗಳಲ್ಲಿ ಸೈಕಲ್ ಓಡಿಸುವುದಕ್ಕೆ ಸೂಕ್ತ ಸೌಕರ್ಯವಿಲ್ಲ. ಪ್ರತ್ಯೇಕ ಪಥ ರಚನೆಯಾಗಬೇಕು. ಹೀಗಿದ್ದಾಗ ಪಾಲಕರೂ ವಿದ್ಯಾರ್ಥಿಗಳಿಗೆ ಸೈಕಲ್ ಕೊಡಿಸುವುದಕ್ಕೆ ಮುಂದಾಗುತ್ತಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಬಿಎನ್ಎಂ ಶಿಕ್ಷಣ ಸಂಸ್ಥೆಗಳಲ್ಲಿ 1993ರಿಂದ ಪರಿಸರ ಕ್ಲಬ್ ಮೂಲಕ ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಮೂಡಿಸಲಾಗುತ್ತಿದೆ. ಬನಶಂಕರಿ 2ನೇ ಹಂತದಲ್ಲಿ ಅಂದಾಜು 800ಕ್ಕೂ ಅಧಿಕ ಗಿಡಗಳನ್ನು ನೆಟ್ಟು ವಿದ್ಯಾರ್ಥಿಗಳು ಪೋಷಿಸುತ್ತಿದ್ದಾರೆ ಎಂದರು.

### ಮಾದರಿ ಶಿಕ್ಷಣ ಸಂಸ್ಥೆ

ಸೈಕಲ್‌ಸ್ಟ್ರೀಟ್ ಆಯೋಜನೆ ಮಾಡುತ್ತಿರುವ ಬಿಎನ್ಎಂ ಸಂಸ್ಥೆ ಇತರೆ ಶಿಕ್ಷಣ ಸಂಸ್ಥೆಗಳಿಗೆ ಮಾದರಿಯಾಗಬೇಕಾಗಿದೆ. ಬಿಎನ್ಎಂನಲ್ಲಿ ಕಳೆದ 7 ವರ್ಷದಿಂದ ಸೈಕಲ್ ಖರೀದಿಸುವ ವಿದ್ಯಾರ್ಥಿಗಳಿಗೆ 5 ಸಾವಿರ ರೂ. ಧನ ಸಹಾಯ ಮಾಡಲಾಗುತ್ತಿದೆ. 4 ವರ್ಷಗಳ ತಾಂತ್ರಿಕ ಶಿಕ್ಷಣ ಪದವಿ ಮುಗಿಸಿದ ಮೇಲೆ ಈ ಹಣವನ್ನು ಹಿಂದಿರಿಗಿಸಿದರೆ ಸಾಕು. ಜತೆಗೆ ಸ್ವಂತ ಖರ್ಚಿನಿಂದಲೇ ಸೈಕಲ್ ಖರೀದಿಸುವ ವಿದ್ಯಾರ್ಥಿಗೆ 2 ಸಾವಿರ ರೂಪಾಯಿಯನ್ನು ಸಂಸ್ಥೆ ನೀಡುತ್ತಿದೆ. ಈ ಮೂಲಕ ವಿದ್ಯಾರ್ಥಿಗಳು ಕಾಲೇಜಿಗೆ ಬರುವಾಗ ಸೈಕಲ್ ಬಳಸುವಂತೆ ಸಂಸ್ಥೆ ಪ್ರೇರೇಪಿಸುತ್ತಿದೆ. ನಗರದಲ್ಲಿನ ಒಂದಿಷ್ಟು ಕಾಲೇಜುಗಳಲ್ಲಿ ಇಂತಹ ಸಣ್ಣ ಬದಲಾವಣೆ ತಂದರೆ ಪರಿಸರ ಉಳಿವಿಗೆ ದೊಡ್ಡ ಕೊಡುಗೆ ಸಿಗಲಿದೆ.